ಭಾರತೀಯ ಜನತಾ ಪಕ್ಷ

# NAVA PARVA


NARENDRA MODI PRAMOD MADHWARAJ



# ಪ್ರಮೋದ್ ಮಧ್ವರಾಜ್

ಮಾಜಿ ಸಚಿವರು, ಕರ್ನಾಟಕ ಸರಕಾರ
ಮೀನುಗಾರಿಕೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರು

# ಭಾರತೀಯ ಜನತಾ ಪಕ್ಷ


















ಭಾರತೀಯ ಜನತಾ ಪಕ್ಷ

# ಪ್ರಮೋದ್ ಮಧ್ವರಾಜ್ - ವ್ಯಕ್ತಿಚಿತ್ರಣ

ಸಾಮಾಜಿಕ ಪರಿವರ್ತನೆಗೆ ಬೇಕಿರುವುದು ಸಮರ್ಥ ನಾಯಕತ್ವ. ಪಥದರ್ಶಕ ಪರಿವರ್ತನೆಗೆ, ಸುಸ್ಥಿರ ಸಾಮಾಜಿಕ ಬದುಕಿನ ವಿನ್ಯಾಸಕ್ಕೆ ದೂರದೃಷ್ಟಿಯ ನಾಯಕತ್ವ ಅತ್ಯಂತ ಅಗತ್ಯ. ರಾಜಕೀಯ ಕ್ಷೇತ್ರ ಬಯಸುವುದು ಅಂತಹ ಮಾದರಿ ನಾಯಕರುಗಳನ್ನು. ಅವರಿಂದಲೇ ಸಕಾರಾತ್ಮಕವಾದ ಬದಲಾವಣೆ ಸಾಧ್ಯ. ಅಂಥಹ ವಿರಳ ನಾಯಕರಲ್ಲಿ ಓರ್ವರು ಶ್ರೀಯುತ ಪ್ರಮೋದ್ ಮಧ್ವರಾಜ್. ಭಾರತದ ನಕಾಶೆಯಲ್ಲಿ ಕರ್ನಾಟಕದ ಉಡುಪಿಗೆ ಚಿರಂತನವಾದ ಅನನ್ಯ ಸ್ಥಾನವಿದೆ. ಉಡುಪಿಯ ರಾಜಕಾರಣದ ಇತಿಹಾಸದಲ್ಲಿ ಮಹತ್ತರವಾದ ಮೈಲುಗಲ್ಲುಗಳನ್ನ ಸ್ಥಾಪಿಸಿದ ಪ್ರಮೋದ್ ಮಧ್ವರಾಜ್ “ರಾಜಕಾರಣ ರಂಗದ ಸಮಚಿತ್ತಭಾವದ ರಾಜಕಾರಣಿ” ಎಂದೇ ಬಣ್ಣಿಸಲ್ಪಟ್ಟವರು. ಜನಕಲ್ಯಾಣ ಚಿಂತನೆ, ದೂರಗಾಮಿ ಯೋಜನೆ, ಮತ್ತು ತನ್ನ ಸೇವಾ ಅವಧಿಯಲ್ಲಿ ವಿವಿಧ ಕ್ಷೇತ್ರಗಳಿಗೆ ಅವರು ನೀಡಿದ ಅನುಪಮ ಕೊಡುಗೆಯ ಕಾರಣಕ್ಕೆ ಪ್ರಮೋದ್ ಜನಮನ್ನಣೆ ಗಳಿಸಿಕೊಂಡವರು.

ಅವರಲ್ಲಿನ ರಾಷ್ಟ್ರೀಯವಾದಿ ಚಿಂತನೆ, ಧಾರ್ಮಿಕ ಶ್ರದ್ಧೆ, ಪಾರಂಪರಿಕವಾದ ಭಾರತೀಯ ಜೀವನ ಪದ್ಧತಿಯ ಅನುಸರಣೆ ಮೊದಲಾದ ಕಾರಣಕ್ಕೆ ಪ್ರಮೋದ್ ಮಧ್ವರಾಜ್ ಭಾರತೀಯ ಸಂಸ್ಕೃತಿ, ವಿಚಾರಧಾರೆ ಪ್ರಣೀತ ಮಾದರಿ ರಾಜಕಾರಣಿ ಎನ್ನುವುದನ್ನು ಉಲ್ಲೇಖಿಸಬಹುದು. ರಾಜ್ಯರಾಜಕಾರಣಿಯಾದರೂ ಅವರಲ್ಲಿ ರಾಷ್ಟ್ರಚಿಂತನೆಯ ಜಾಗರಣೆ, ದೂರದೃಷ್ಟಿ, ಎಲ್ಲಾ ಕ್ಷೇತ್ರದ ಬಗೆಗೂ ಇರುವ ಸಮಗ್ರವಾದ ಅಪಾರ ಅರಿವು, ಯಾವುದೇ ವಿಭಾಗವನ್ನೂ ಅತ್ಯಂತ ಕಡಿಮೆ ಅವಧಿಯಲ್ಲಿ, ಸುಲಭವಾಗಿ ಅರ್ಥೈಸಿಕೊಳ್ಳುವ ಪರಿಜ್ಞಾನ, ರಾಜಕಾರಣದ ಸೂಕ್ಷ್ಮಪ್ರಜ್ಞೆಯನ್ನು ಗಮನಿಸಿದರೆ ಅವರನ್ನ ರಾಷ್ಟ್ರರಾಜಕಾರಣಕ್ಕೆ ಸೂಕ್ತ ರಾಜಕಾರಣಿಯಾಗಿ ಪರಿಗಣಿಸಬಹುದು.

ವ್ಯಕ್ತಿಯೋರ್ವನ ಅರ್ಹತೆಯನ್ನು ಪರಿಗಣಿಸಲು ಸಾಧ್ಯವಾಗುವುದು ಆತನಿಗೆ ಅಧಿಕಾರ ಸಿಕ್ಕಾಗ. ತಾನಿರುವ ಕ್ಷೇತ್ರದಲ್ಲಿ ಉನ್ನತ ಸ್ಥಾನವನ್ನು ತಲುಪುವುದು ಕೆಲವೇ ಕೆಲವರಿಂದ ಮಾತ್ರವೇ ಸಾಧ್ಯವಾಗುವುದು. ಅಂತಹ ವಿರಳರಲ್ಲಿ ಪ್ರಮೋದ್ ಮಧ್ವಾರಾಜ್ ಕೂಡ ಓರ್ವರು. 2018 ರ ಅವಧಿಯಲ್ಲಿ ಕರ್ನಾಟಕದ 224 ಶಾಸಕರ ಪೈಕಿ ನಂ. 1 ಶಾಸಕರಾಗಿ ವಿಶ್ವದರ್ಜೆಯ ಶ್ರೇಷ್ಠ ಮಾಧ್ಯಮ ಸಮೂಹ ಟೈಮ್ಸ್ ಗ್ರೂಪ್ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟಿರುವುದು ಮಧ್ವರಾಜ್ ಹೆಗ್ಗಳಿಕೆ.


Madhwaraj tops list of performers; B'luru MLAs are all average Joes

TOP FIVE ISSUES

OFFSIDE

UNLIKE YOU... I'M NOT ACTUALLY A FREEBIE... I'M A NECESSITY!

SARI

LIQUOR

TIMES CITY / STATE



# ಕೌಟುಂಬಿಕ ಹಿನ್ನಲೆ

ಅಕ್ಟೋಬರ್ 17, 1968 ರಂದು ಕರ್ನಾಟಕದ ಉಡುಪಿಯಲ್ಲಿ ಜನಿಸಿದ ಪ್ರಮೋದರ ತಂದೆ, ಮಲ್ಪೆ ಮಧ್ವರಾಜ್ ಆಗಲೇ ಪ್ರಸಿದ್ದ ನಾಯಕರಾಗಿ, ಶಾಸಕರಾಗಿ ಜನಾನುರಾಗಿಯಾಗಿ ಗುರುತಿಸಿಕೊಂಡಿದ್ದರು. ಅವರನ್ನು ಜನ ರಾಜಮರ್ಯಾದೆಯಲ್ಲಿ ಗೌರವಿಸುತ್ತಿದ್ದರು. ಮಲ್ಪೆ ಮಧ್ವರಾಜ್ ಮೀನುಗಾರಿಕಾ ವರ್ಗದ ಅನಭಿಷಿಕ್ತ ದೊರೆಯಾಗಿ ಮೆರೆದವರು. ಅವರು ಮೊಟ್ಟ ಮೊದಲಿಗೆ ಮಲ್ಪೆಯಲ್ಲಿ ಮೀನುಗಾರಿಕಾ ಬಂದರನ್ನು ಪ್ರಾರಂಭಿಸಿದವರು. ಇವತ್ತು ಉಡುಪಿ ಜಿಲ್ಲೆಯ ಮಲ್ಪೆ ಸಾವಿರಾರು ಕೋಟಿ ವ್ಯವಹಾರ ನಿರ್ವಹಿಸುತ್ತಿದೆ. ಅದೆಲ್ಲದಕ್ಕೂ ಕಾರಣ ಮಲ್ಪೆ ಮಧ್ವರಾಜರ ದೂರಗಾಮಿ ಚಿಂತನೆ. 1962 ರಲ್ಲಿ ಉಡುಪಿಯ ಶಾಸಕರಾಗಿದ್ದ ಮಧ್ವರಾಜ್ 'ಮತ್ಸ್ಯರಾಜ' ಎಂದೇ ಜನಜನಿತರಾದವರು. ಅವರ ತಾಯಿ ಮನೋರಮಾ ಮಧ್ವರಾಜ್ ನಾಲ್ಕು ಅವಧಿಗೆ ಉಡುಪಿಯ ಶಾಸಕಿಯಾಗಿ, ಮೀನುಗಾರ ಸಮುದಾಯದ ದೇಶದ ಮೊತ್ತ ಮೊದಲ ಮಹಿಳಾ ಕ್ಯಾಬಿನೇಟ್ ಸಚಿವೆಯಾಗಿ ಸೇವೆ ಸಲ್ಲಿಸಿದವರು. ಮುಂದೆ ಉಡುಪಿ ಲೋಕಸಭಾ ಕ್ಷೇತ್ರದಿಂದ ಸಂಸದೆಯಾಗಿಯೂ ಮನೋರಮಾ ಮಧ್ವರಾಜ್ ಆಯ್ಕೆಯಾದರು.

ಬಾಲ್ಯದಿಂದಲೂ ರಾಜನೀತಿಯ ನಿಲುವುಗಳನ್ನು ಮನೆಯಿಂದಲೇ ಗಮನಿಸುತ್ತ ಬಂದ ಪ್ರಮೋದ್ ಮಧ್ವರಾಜ್ ತನ್ನ ಪೋಷಕರ ಮೂಲಕ ಸಾರ್ವಜನಿಕ ಸೇವೆಯ ಮಾನವೀಯ ನಡಾವಳಿಯನ್ನು ಕಲಿತವರು. ಇವರು ಶ್ರೀಮತಿ ಸುಪ್ರಿಯರವರನ್ನು ವಿವಾಹವಾಗಿ ಕು. ಪ್ರತ್ಯಕ್ಷ ಯಂಬ ಮಗಳನ್ನು ಹೊಂದಿರುತ್ತಾರೆ .





# ಶೈಕ್ಷಣಿಕ ಹಿನ್ನೆಲೆ

ಪ್ರಮೋದ್ ಮಧ್ವರಾಜ್ ಕಂಪ್ಯೂಟರ್ ಸೈನ್ಸ್‌ನಲ್ಲಿ ಎಂಜಿನಿಯರಿಂಗ್ ದಾಖಲಾಗಿದ್ದು ಕರ್ನಾಟಕದ ಪ್ರತಿಷ್ಠಿತ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ. ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣವನ್ನು ಸೈಂಟ್ ಸಿಸಿಲಿಸ್ ಕಾನ್ವೆಂಟ್ ಉಡುಪಿ, ಕ್ರಿಶ್ಚಿಯನ್ ಹೈಸ್ಕೂಲ್ ಉಡುಪಿ, ಮತ್ತು ಟಿಎ ಪೈ ಆಂಗ್ಲ ಮಾಧ್ಯಮ ಪ್ರೌಢಶಾಲೆ ಉಡುಪಿಯಲ್ಲಿ ಪೂರ್ಣಗೊಳಿಸಿದರೆ ತಮ್ಮ ಪದವಿಪೂರ್ವ ಶಿಕ್ಷಣವನ್ನು ಉಡುಪಿಯ ಮಹಾತ್ಮ ಗಾಂಧಿ ಸ್ಮಾರಕ ಕಾಲೇಜಿನಲ್ಲಿ ಮುಗಿಸಿದರು. ಶಾಲಾ, ಕಾಲೇಜು ದಿನಗಳಲ್ಲಿ ವಿಧ್ಯಾರ್ಥಿ ನಾಯಕನಾಗಿ ನಾಯಕತ್ವದ ಮೌಲ್ಯವನ್ನ ಬೆಳೆಸಿಕೊಂಡು ಬಂದಿದ್ದ ಪ್ರಮೋದ್ ಮಧ್ವರಾಜ್ ಯುವನಾಯಕನಾಗಿ ಆಗಲೇ ಜನಮನ್ನಣೆ ಗಳಿಸಿಕೊಂಡಿದ್ದರು.

# ಉದ್ಯಮಿಯಾಗಿ ಬೆಳೆದದ್ದು

ಸಕ್ರಿಯ ರಾಜಕೀಯಕ್ಕೆ ಪ್ರವೇಶಿಸುವ ಮೊದಲು, ಪ್ರಮೋದ್ ಅತ್ಯಂತ ಯಶಸ್ವಿ ಉದ್ಯಮಿಯಾಗಿದ್ದರು. ಕುಟುಂಬದ ವ್ಯವಹಾರವೇ ಮತ್ಸ್ಯೋದ್ಯಮವಾಗಿತ್ತು. ತಾನು ಉದ್ಯಮ ಕ್ಷೇತ್ರಕ್ಕೆ ಹೋದ ನಂತರ ಪ್ರಮೋದ್ ಅದನ್ನಇನ್ನಷ್ಟು ಉನ್ನತ ಸ್ಥರಕ್ಕೆ, ಉತ್ಕೃಷ್ಟ ಗುಣಮಟ್ಟದ ಕಡೆಗೆ ಕೊಂಡೊಯ್ದರು. ಅದರ ಜೊತೆಗೆ ತನ್ನದೇ ಕನಸಿನ ತಮ್ಮದೇ ಹಲವು ಯಶಸ್ವಿ ಉದ್ಯಮಗಳನ್ನು ಪ್ರಾರಂಭಿಸಿದರು ಅದನ್ನ ಕೆಲವೇ ವರ್ಷಗಳಲ್ಲಿ ಲಾಭದಾಯಕಗೊಳಿಸಿ ಉನ್ನತೀಕರಣಗೊಳಿಸಿದ್ದು ಅವರ ಶೃದ್ಧೆಗೆ, ಕಾರ್ಯತತ್ಪರತೆಗೆ ಒಂದು ಸ್ಪಷ್ಟ ನಿದರ್ಶನ.

# ನೊಂದವರ ಪಾಲಿನ ಕಲ್ಪವೃಕ್ಷ

ಪ್ರಮೋದ್ ತನ್ನ ರಾಜಕೀಯ ವೃತ್ತಿಜೀವನದ ಆಚೆಗೂ ನಿತ್ಯ ನಿರಂತರವಾಗಿ ತನ್ನ ಸೇವಾ ಚಟುವಟಿಕೆಯನ್ನು ಮುಂದುವರಿಸಿಕೊಂಡೇ ಬಂದವರು. ವಿದ್ಯಾರ್ಥಿ ವೇತನಕ್ಕೆ, ಆರೋಗ್ಯ ವಿಮೆಗೆ, ಆರ್ಥಿಕ ಅಶಕ್ತರಿಗೆ, ವಸತಿಗಳ ನಿರ್ಮಾಣಕ್ಕೆ, ಶೈಕ್ಷಣಿಕ ಕ್ಷೇತ್ರಕ್ಕೆ ಹೀಗೆ ಪ್ರಮೋದ್ ನೆರವು ಕಡಲಿನ ಅಲೆಯಂತೆ ನಿರಂತರವಾಗಿ ಜಾರಿಯಲ್ಲಿತ್ತು. ಮಲ್ಪೆ ಮಧ್ವರಾಜ್ ಚಾರಿಟೇಬಲ್ ಟ್ರಸ್ಟ್ ಸ್ಥಾಪಿಸಿ ಅದರ ಮೂಲಕ ದೀನರ,ದುರ್ಬಲರ ಏಳಿಗೆಗೆ ಬಲವಾಗಿ ನಿಂತಿದ್ದರು. ತನ್ನ ತಂದೆಯ ಹೆಸರಲ್ಲಿ ತಾನು ಸ್ಥಾಪಿಸಿದ ಟ್ರಸ್ಟ್ ಎಂದೂ ಬೇರೆ ಸಂಸ್ಥೆ ಯಾ ವ್ಯಕ್ತಿಯಿಂದ ಒಂದೇ ಒಂದು ರೂಪಾಯಿ ನೆರವು ಪಡೆಯದೆ ತನ್ನ ಸ್ವಂತ ದುಡಿಮೆಯ ಕೋಟ್ಯಾಂತರ ರೂಪಾಯಿ ಮೊತ್ತಗಳನ್ನು ಸೇವಾಧಾರೆಯಾಗಿ ದೇಣಿಗೆ ನೀಡಿದ ಕಾರಣಕ್ಕೇ ಪ್ರಮೋದ್ ಮಧ್ವರಾಜ್ ಕೂಡ ಸೋತವರ ಪಾಲಿಗೆ ವರದಾನವಾಗಿ, ಕರುಣಾಹೃದಯಿ ಮಹರಾಜನಂತೆ ಕಾಣಿಸಿಕೊಂಡವರು.





# ರಾಜಕೀಯ ವೃತ್ತಿಜೀವನ

ತನ್ನ ಉದ್ಯಮರಂಗದ ಹಾಗೆ ಪ್ರಮೋದರ ರಾಜಕೀಯ ಯಾನ ಸುಲಭವಾಗಿರಲಿಲ್ಲ. ಸೋಲಿನ ಮೇಲೆ ಸೋಲು ಬಂದರೂ ಧೃತಿಗೆಡದ ಪ್ರಮೋದ್ ರಾಜಕಾರಣದ ಅಂಗಳದಲ್ಲಿ ಗಟ್ಟಿಯಾಗಿ ನಿಂತು ದೃಢವಾದ ಹೆಜ್ಜೆಗಳನ್ನಿರಿಸಿ ಮುನ್ನಡೆಯುತ್ತಲೇ ಸಾಗಿದ ಕಾರಣಕ್ಕೆ ರಾಜಕಾರಣದಲ್ಲಿ ಫೀನಿಕ್ಸ್ ಪಕ್ಷಿಯಂತೆ ಬೆಳೆದು ಗೆಲುವು ಪಡೆದು ಮೊದಲ ಅವಧಿಯಲ್ಲೇ ಕ್ಯಾಬಿನೇಟ್ ದರ್ಜೆಯ ಮಂತ್ರಿಯಾದರು. ರಾಜ್ಯದ ಇನ್ನೂರ ಇಪ್ಪತ್ತನಾಲ್ಕು ಶಾಸಕರಲ್ಲೇ ನಂಬರ್ ಒನ್ ಶಾಸಕರಾಗಿ ಗುರುತಿಸಲ್ಪಟ್ಟರು. 2004 ರಲ್ಲಿ ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಪ್ರಮೋದ್ ವೀರೋಚಿತವಾಗಿ ಸೋಲೊಪ್ಪಿಕೊಂಡಿದ್ದರು. 2008 ರಲ್ಲಿ ಉಡುಪಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಪ್ರಮೋದ್ ಆಗಲೂ ಸೋಲುಂಡರು! ಆದರೆ ಸೋಲಿಗೆ ಸವಾಲೊಡ್ಡಿ ಮತ್ತೆ 2013 ರಲ್ಲಿ ಪ್ರಮೋದ್ ಮಧ್ವರಾಜ್ ಪ್ರಚಂಡ ಬಹುಮತದೊಂದಿಗೆ ಗೆದ್ದು ಬಂದಿದ್ದರು. 2016 ರಲ್ಲಿ ಕಾಂಗ್ರೆಸ್ ಸರ್ಕಾರದಲ್ಲಿ ಕ್ರೀಡೆ ,ಯುವ ಸಬಲೀಕರಣ ಮತ್ತು ಮೀನುಗಾರಿಕೆ ಖಾತೆಗಳ ಮಂತ್ರಿಯಾಗಿ ಕರ್ನಾಟಕ ಸರ್ಕಾರದ ಜನಪ್ರಿಯ ಮಂತ್ರಿಗಳಲ್ಲಿ ಓರ್ವರಾಗಿದ್ದರು. ಅದಕ್ಕೂ ಮೊದಲು 2015 ರಲ್ಲಿ ಕಂದಾಯ ಇಲಾಖೆಗೆ ಸಂಸದೀಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದ ಪ್ರಮೋದ್, ಆ ಇಲಾಖೆಯ ಕಛೇರಿಗಳ ಕರ್ತವ್ಯ ಪರಿಪಾಲನೆಯ ವೇಗ ಹೆಚ್ಚಿಸುವಲ್ಲಿ ಮಹತ್ವದ ನಿಲುವುಗಳನ್ನು ತಳೆದಿರುವುದನ್ನು ಇಲ್ಲಿ ನೆನೆಯಲೇ ಬೇಕಿದೆ. ಅದರ ತರುವಾಯ 2018 ರ ಚುನಾವಣೆಯಲ್ಲಿ ಪ್ರಮೋದ್ ಮತ್ತೆ ಸೋಲನುಭವಿಸಿದರು ಆಗ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿತ್ತು. 2019 ರಲ್ಲಿ ಮತ್ತೆ ಉಡುಪಿ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧಿಸಿ ಕೇಂದ್ರದ ನರೇಂದ್ರ ಮೋದಿಯವರ ಅಲೆಯ ಮುಂದೆ ಪ್ರಮೋದ್ ಗೆಲ್ಲಲಾಗಲಿಲ್ಲ! ಆದರೂ ಎಂದೂ ಜನರಿಂದ, ಜನ ಸೇವೆಯಿಂದ ಹಿಂದೆ ಸರಿದವರಲ್ಲ. ಸೋತಾಗಲೂ, ಗೆದ್ದಾಗಲೂ ಪ್ರಮೋದ್ ಜನರ ಜೊತೆಗೆ ನಿರಂತರವಾಗಿ ಬೆರೆತವರು. ಕಾಂಗ್ರೆಸ್ ಸರ್ಕಾರ ಟಿಪ್ಪು ಜಯಂತಿಯನ್ನು ಘೋಷಿಸಿದಾಗ ಕಾಂಗ್ರೆಸ್ ಪಕ್ಷದ ಕ್ಯಾಬಿನೇಟ್ ದರ್ಜೆಯ ಮಂತ್ರಿಯಾಗಿಯೂ ಯಾವುದೇ ಮುಲಾಜಿಲ್ಲದೆ ಪ್ರಮೋದ್ ಅದನ್ನು ವಿರೋಧಿಸಿದ್ದರು. ಅದು ಪ್ರಮೋದ್ ಮಧ್ವರಾಜ್ ತಪ್ಪನ್ನು ಎನ್ನುವ ನೇರವಂತಿಕೆಯ ಗುಣಕ್ಕೊಂದು ಸ್ಪಷ್ಟ ನಿದರ್ಶನ.





# ಮೋದಿ ನಾಯಕತ್ವಕ್ಕೆ ಮನಸೋತ ಪ್ರಮೋದ್ ಮಧ್ವರಾಜ್

ರಾಷ್ಟ್ರದ ದಾರ್ಶನಿಕ ರಾಜಕಾರಣಿ, ಜಾಗತಿಕವಾಗಿ ಭರತಭುವಿಯ ಕಡೆಗೆ ಗೌರವದ ದೃಷ್ಟಿ ಮೂಡಿಸಿದ ದೇಶದ ಹೆಮ್ಮೆಯ ಸಂತಸದೃಶ ಜನನಾಯಕ ನರೇಂದ್ರ ಮೋದಿಯವರ ಅಭಿವೃದ್ಧಿಪರ ಚಿಂತನೆ, ರಾಜಕೀಯ ನಿಲುವು ಮತ್ತು ಘನ ನಾಯಕತ್ವಕ್ಕೆ ಮನಸೋತ ಪ್ರಮೋದ್ ಮಧ್ವರಾಜ್ ಕಾಂಗ್ರೆಸ್ ಪಕ್ಷಕ್ಕೆ ರಾಜಿನಾಮೆಯನ್ನು ನೀಡಿ ಭಾರತೀಯ ಜನತಾ ಪಾರ್ಟಿಗೆ ಸೇರ್ಪಡೆಗೊಳ್ಳುವ ನಿಲುವಿಗೆ ಬಂದರು. ಆ ಸಂದರ್ಭದಲ್ಲಿ ಅವರು ರಾಜ್ಯ ಕಾಂಗ್ರೆಸ್ ಪ್ರದೇಶ ಸಮಿತಿಯ ಉಪಾಧ್ಯಕ್ಷರಾಗಿದ್ದರೂ ಆ ಹುದ್ದೆಗೆ ರಾಜಿನಾಮೆ ನೀಡಿ ಮೇ 07 -2022 ರಲ್ಲಿ ಬಿಜೆಪಿಗೆ ಸೇರ್ಪಡೆಯಾದರು. ಅದು ಪ್ರಮೊದ್ ಮಧ್ವರಾಜರ ರಾಜಕೀಯ ನಡೆಯ ಮಹತ್ತರವಾದ ತಿರುವು.





# ಮಿಸ್ಟರ್ ಕ್ಲೀನ್ ಪ್ರಮೋದ್ ಮಧ್ವರಾಜ್

ರಾಜಕಾರಣಿಗಳು ತಮ್ಮ ಪ್ರಭಾವ ಬಳಸಿಕೊಂಡು ತೆರಿಗೆ ವಂಚಿಸುವ ಪ್ರಕರಣವನ್ನ ನಾವೆಲ್ಲ ಕೇಳಿಯೇ ಇರುತ್ತೇವೆ. ಆದರೆ ಪ್ರಮೋದ್ ಅದಕ್ಕೆ ಅಪವಾದ! ಎಲ್ಲಾ ರಾಜಕಾರಣಿಗಳು ತಮ್ಮ ತೆರಿಗೆ ವಿನಾಯತಿ ಪಡೆಯಲು ಹಲವಾರು ಕಳ್ಳದಾರಿಯನ್ನ ಬಳಸುವಾಗ ಪ್ರಮೋದ್ ತೆರಿಗೆ ಇಲಾಖೆಯಿಂದ ನಂಬರ್ ಒನ್ ತೆರಿಗೆ ಪಾವತಿದಾರ ಎಂಬ ಹಿರಿಮೆಗೆ ಪಾತ್ರರಾದವರು. ಪ್ರಮೋದ್ ಓರ್ವ ಪ್ರಾಮಾಣಿಕ, ಶುದ್ಧಹಸ್ತ ರಾಜಕಾರಣಿ ಎನ್ನುವುದಕ್ಕೆ ಇದೊಂದು ಉದಾಹರಣೆ.ರಾಜಕೀಯ ವ್ಯವಸ್ಥೆಯಲ್ಲಿ ಪ್ರಮೋದ್ ಹೆಸರಿಗಾಗಲಿ ಅವರು ಕರ್ತವ್ಯ ನಿರ್ವಹಿಸಿದ್ದ ಇಲಾಖೆಯ ಹೆಸರಿಗಾಗಲಿ ಎಲ್ಲಿಯೂ ಸಣ್ಣ ಭ್ರಷ್ಟಾಚಾರದ ಆರೋಪ ಬಂದದ್ದಿಲ್ಲ. ಅವರ ಸೇವಾ ಅವಧಿಯಲ್ಲಿ ತನ್ನ ಕೈ ಕೆಳಗಿನ ಅಧಿಕಾರಿಗಳೂ ಶುದ್ಧಹಸ್ತರಾಗಿಯೇ ಕರ್ತವ್ಯನಿರ್ವಹಿಸಿದ್ದರು. ಎಲ್ಲಾ ವಿಭಾಗದಲ್ಲಿಯೂ ಶಿಸ್ತು ಎದ್ದು ಕಾಣುತ್ತಿತ್ತು, ಇಲಾಖೆ ಜನಸ್ನೇಹಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿತ್ತು, ಮಂತ್ರಿಗಳಾಗಲಿ, ಅವರ ಅಧೀನ ಅಧಿಕಾರಿಗಳಾಗಲಿ ಜನರಿಗೆ ಸುಲಭವಾಗಿ ಲಭ್ಯರಿದ್ದಿದ್ದರು.  ಈ ಎಲ್ಲಾ ಕಾರಣಗಳಿಗಾಗಿ ಅತ್ಯಂತ ಶುದ್ಧಹಸ್ತ, ಪ್ರಾಮಾಣಿಕ ರಾಜಕಾರಣಿಗಳ ಸಾಲಿನಲ್ಲಿ ಪ್ರಮೋದ್ ಮಧ್ವರಾಜ್ ಮೇಲ್ಪಂಕ್ತಿಯಲ್ಲಿ ನಿಲ್ಲುತ್ತಾರೆ.

ಭಾರತೀಯ ಜನತಾ ಪಕ್ಷ

# ಸಾಧನೆಗಳ ಮೆಲುಕು

•ಅವರು ರಾಜ್ಯದ ಒಳನಾಡಿನ ಮೀನುಗಾರಿಕೆ ನೀತಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ಪರಿಚಯಿಸುವಲ್ಲಿ ಹಾಗೂ ಬದಲಾಯಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

•ಕ್ರೀಡಾ ಸಚಿವರಾಗಿದ್ದ ಅವಧಿಯಲ್ಲಿ ಅವರು ಕರ್ನಾಟಕದಲ್ಲಿ ಮೊದಲ ಕ್ರೀಡಾ ನೀತಿಯನ್ನು ಹೊರತಂದರು.

•ಸಾರ್ವಜನಿಕ ಅಧಿಸೂಚನೆಗಳೊಂದಿಗೆ ಎಲ್ಲಾ ಇಲಾಖೆಗಳ ಅಧಿಕಾರಿಗಳೊಂದಿಗೆ ಎಲ್ಲಾ ಗ್ರಾಮಗಳು ಮತ್ತು ವಾರ್ಡ್‌ಗಳಿಗೆ ಭೇಟಿ ನೀಡುವ ಮೂಲಕ ಅವರು ವಿಶಿಷ್ಟವಾದ ಮತ್ತು ವಿನೂತನವಾದ "ಸಾರ್ವಜನಿಕ ಸಭೆ" ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಇದರಿಂದ ಜನಸಾಮಾನ್ಯರು ತಮ್ಮ ಕುಂದು ಕೊರತೆಗಳನ್ನು ವ್ಯಕ್ತಪಡಿಸಲು ಮತ್ತು ಸ್ಥಳದಲ್ಲೇ ಪರಿಹರಿಸಲು ಸಹಾಯ ಮಾಡಿದರು.

• ಎಲ್ಲಾ ಸರ್ಕಾರಿ ಕೆಲಸಗಳಲ್ಲಿ ಸಾರ್ವಜನಿಕ ಭಾಗವಹಿಸುವಿಕೆಯನ್ನು ಒಳಗೊಂಡಿರುವ ಧ್ಯೇಯವಾಕ್ಯವಾಗಿ, ಪಾರದರ್ಶಕತೆ ಮತ್ತು ಸಾರ್ವಜನಿಕ ಸಹಭಾಗಿತ್ವವು ಅವರ ಆಡಳಿತದ ಮೂಲಾಧಾರವಾಗಿದೆ. ಜನರ ಭಾಗವಹಿಸುವಿಕೆ ಮತ್ತು ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಖಚಿತಪಡಿಸುವತ್ತ ಕಾರ್ಯಗತಗೊಳಿಸಿದ ಪ್ರತಿಯೊಂದು ಸಾರ್ವಜನಿಕ ಕೆಲಸವನ್ನು , ಅವರು ಸಾರ್ವಜನಿಕ ತಾಣದಲ್ಲಿ ಪ್ರಕಟಗೊಳಿಸಿ ಕೆಲಸದ ಎಲ್ಲಾ ವಿವರಗಳನ್ನು ನಮೂದಿಸಿದರು.

• ಸಾಮಾನ್ಯ ವ್ಯಕ್ತಿಯ ಮೂಲಭೂತ ಅವಶ್ಯಕತೆಗೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅವರು ಹೆಚ್ಚು ಗಮನಹರಿಸಿದರು. ಎಲ್ಲರಿಗೂ ಮನೆ, ಕುಡಿಯುವ ನೀರು, ವಿದ್ಯುತ್ ಮತ್ತು ರಸ್ತೆಗಳನ್ನು ಒದಗಿಸುವುದು ಅವರ ಮೊದಲ ಆದ್ಯತೆಯಾಗಿ ಈ ದಿಸೆಯಲ್ಲಿ ಕ್ಷೇತ್ರದ ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸಲು ಅನೇಕ ಕುಡಿಯುವ ನೀರಿನ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ.

•ಮನೆಯಿಲ್ಲದ ಮತ್ತು ಆರ್ಥಿಕವಾಗಿ ದುರ್ಬಲ ವರ್ಗದ ಜನರಿಗಾಗಿ ನಿವೇಶನ ಹಾಗೂ ಬಹು ಹಂತದ ಅಪಾರ್ಟ್ ಮೆಂಟ್ ಗಳನ್ನು ನೀಡಿ ಎಲ್ಲರಿಗೂ ಸೂರನ್ನು ನೀಡುವ ವ್ಯಕ್ತಿಯಾಗಿದ್ದಾರೆ.

• ಕರ್ನಾಟಕದ ಉಡುಪಿ ಜಿಲ್ಲೆಯ ಉಡುಪಿ ತಾಲೂಕನ್ನು 24x7 ನಿರಂತರ ವಿದ್ಯುತ್ ಪೂರೈಕೆಯನ್ನು ಹೊಂದಿರುವ ಏಕೈಕ ತಾಲೂಕು ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

•ಗುಣಮಟ್ಟದ ಶಿಕ್ಷಣವನ್ನು ನೀಡುವುದು ಹಾಗೂ ಆ ಪ್ರದೇಶದಲ್ಲಿ ಹೊಸ ಶೈಕ್ಷಣಿಕ ಸೌಲಭ್ಯಗಳನ್ನು ಬಲಪಡಿಸಲು ಮತ್ತು ನಿರ್ಮಿಸಲು ಅವರು ಪ್ರಖರವಾದ ಆದ್ಯತೆಯನ್ನು ನೀಡಿದರು. ಅದೇ ರೀತಿ ಜಿಲ್ಲೆಯಲ್ಲಿ ಸಾರ್ವಜನಿಕ ಆರೋಗ್ಯ ಸೌಲಭ್ಯಗಳನ್ನು ಬಲಪಡಿಸಿದರು.



ಉಡುಪಿಯ ಪಡುಕೆರೆಯಲ್ಲಿ ರಾಜ್ಯದಲ್ಲೇ ಮೊದಲ ಸೀ ವಾಕ್ ವೇ ಪಾಯಿಂಟ್ ನಿರ್ಮಾಣ



ಪ್ರಧಾನ ಮಂತ್ರಿ ಆವಾಜ್ ಯೋಜನೆಯಡಿ ವಸತಿ ರಹಿತರಿಗೆ 500 ಫ್ಲ್ಯಾಟ್‌ಗಳ ನಿರ್ಮಾಣಕ್ಕೆ ಭೂಮಿ ಮಂಜೂರು

ಭಾರತೀಯ ಜನತಾ ಪಕ್ಷ

# ಮೀನುಗಾರರ ಮುಂದಾಳು

ಪ್ರಮೋದ್ ಮಧ್ವರಾಜ್ ಕರಾವಳಿ ಮಾತ್ರವಲ್ಲ ರಾಜ್ಯದ ಮೀನುಗಾರ ಸಮುದಾಯದ ಪ್ರತಿನಿಧಿ ಎಂದೇ ಅವರನ್ನು ಗುರುತಿಸಬಹುದು, ಕರಾವಳಿ ಜಿಲ್ಲೆಗಳ ಆರ್ಥಿಕ ಶಕ್ತಿಯ ಮುಖ್ಯವಾಹಿನಿಯಾದ ಮೀನುಗಾರಿಕಾ ಸಮುದಾಯದ ನಾಯಕನಾಗಿ, ರಾಜ್ಯದ ವಿವಿಧ ಭಾಗಗಳಲ್ಲಿರುವ ಗಂಗಾಮತಸ್ಥ ಸಮುದಾಯದ ನಾಯಕನಾಗಿ ಪ್ರಮೋದ್ ಮಧ್ವರಾಜ್ ಇಂದು ಗುರುತಿಸಲ್ಪಟ್ಟಿದ್ದಾರೆ. ರಾಜ್ಯದಲ್ಲಿ ಅಂದಾಜು ಐವತ್ತು ಲಕ್ಷಕ್ಕೂ ಅಧಿಕ ಮೀನುಗಾರ ಸಮುದಾಯದ ಮತಗಳಿವೆ ಎಂದು ಪರಿಗಣಿಸಬಹುದು. ಪ್ರಮೋದ್ ತನ್ನ ಅಧಿಕಾರಾವಧಿಯಲ್ಲಿ ಮೀನುಗಾರ ಸಮುದಾಯಗಳ ಬೆನ್ನೆಲುಬಾಗಿ ಕಾರ್ಯನಿರ್ವಹಿಸಿದ್ದರು. ಅವರ ಸಾಮಾಜಿಕ ಮತ್ತು ಆರ್ಥಿಕ ಉನ್ನತೀಕರಣಕ್ಕೆ ಹಲವಾರು ಸುಧಾರಣೆಯ ನೀತಿಗಳನ್ನು ಜಾರಿಗೆ ತಂದ ಹೆಗ್ಗಳಿಕೆ ಪ್ರಮೋದ್ ಮಧ್ವರಾಜರಿಗಿದೆ. ಮಲ್ಪೆ ಬಂದರು ನಿರ್ಮಾಣ ಮಾಡಿದ ಮಲ್ಪೆ ಮಧ್ವರಾಜರಂತೆ ಪ್ರಮೋದ್ ಕೂಡ ಮೀನುಗಾರಿಕ ಜೆಟ್ಟಿಗಳಿಗೆ ಹೊಸ ಕಾಯಕಲ್ಪವನ್ನು ಒದಗಿಸಿಕೊಟ್ಟರು, ಪ್ರಮೋದ್  ಅಧಿಕಾರದ ಕಾಲ ಮೀನುಗಾರ ಸಮುದಾಯದ ಸುವರ್ಣಯುಗ ಎಂದೇ ಬಣ್ಣಿಸಬಹುದಾಗಿದೆ.



ಉಡುಪಿ ಪೇಟೆಯಲ್ಲಿ ಮೇಲ್ದರ್ಜೆಯ ಮೀನು ಮಾರುಕಟ್ಟೆ ನಿರ್ಮಾಣ



ಮೀನುಗಾರರ ಶ್ರೇಯೋಭಿವೃದ್ಧಿಗಾಗಿ ಹಲವು ಜೆಟ್ಟಿಗಳನ್ನು ಮೇಲ್ದರ್ಜೆಗೇರಿಸಲಾಯಿತು

# ಮಹಿಳಾ ಸ್ವಾವಲಂಬನೆಗೆ ಸ್ಫೂರ್ತಿ

ಮಹಿಳೆಯರ ಸ್ವಾವಲಂಬನೆಯ,ಸ್ವಾಭಿಮಾನದ ಮತ್ತು ಸಮಾನತೆಯ ಗುರಿಯನ್ನು ಗಮನದಲ್ಲಿ ಇರಿಸಿಕೊಂಡು ಮಹಿಳಾ ಸಮುದಾಯಗಳ ಸಬಲೀಕರಣದ ಕುರಿತು ಪ್ರಮೋದ್ ಮಧ್ವರಾಜ್ ಪ್ರಮುಖ ಆದ್ಯತೆ ನೀಡಿದ್ದರು. ಮಹಿಳೆಯರ ಸ್ವಾವಲಂಬನೆಯ ಬದುಕಿಗಾಗಿ ಹಲವು ಕಾರ್ಯಕ್ರಮಗಳನ್ನು ಆರಂಭಿಸಿದ್ದರು. ಅವರಿಗೆ ಆರ್ಥಿಕ ಸಂಪನ್ಮೂಲಗಳು, ವೃತ್ತಿಪರ ತರಬೇತಿ ಮತ್ತು ಉದ್ಯಮಶೀಲತೆಯ ಅವಕಾಶಗಳನ್ನು ಒದಗಿಸುವುದು, ಮಹಿಳಾ ಹಕ್ಕುಗಳ ಪ್ರತಿಪಾದನೆ, ಕಾನೂನಾತ್ಮಕ ನೆರವು, ಲಿಂಗ ತಾರತಮ್ಯದ ವಿರುದ್ಧ ಕಟ್ಟುನಿಟ್ಟಿನ ಕ್ರಮಗಳ ಕುರಿತು ಬಹಳ ಕಾಳಜಿಯಿಂದ ಪ್ರಮೋದ್ ಕಾರ್ಯನಿರ್ವಹಿಸಿರುವುದು ಶ್ಲಾಘನಾರ್ಹ.





# ಯುವ ಶಕ್ತಿಗೆ ಪುಷ್ಠಿ ನೀಡುವುದು

ಕ್ರೀಡಾ ಸಚಿವರಾಗಿ ಆ ಕ್ಷೇತ್ರದಲ್ಲೂ ಅವರ ಶ್ರಮ ಶ್ಲಾಘನೀಯ. ಯುವ ಪ್ರತಿಭೆಗಳನ್ನು ಪೋಷಿಸುವ ಮಹತ್ವದ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಂಡು ಆ ನಿಟ್ಟಿನಲ್ಲಿ ಯೋಜಿತ ಕಾರ್ಯಗಳನ್ನ ಸಂಕಲಿಸಿದ ಮಧ್ವರಾಜ್ ಉತ್ಸಾಹಿ ಕ್ರೀಡಾಪಟುಗಳನ್ನು ಗುರುತಿಸಲು ಮತ್ತು ಬೆಂಬಲಿಸಲು ವಿವಿಧ ಕಾರ್ಯಕ್ರಮಗಳನ್ನು ಪ್ರಾರಂಭಿಸಿದರು. ಸೋತು ಬಸವಳಿದಿದ್ದ ಕ್ರೀಡಾ ಇಲಾಖೆಯ ಆಯಕಟ್ಟಿನ ಜಾಗದಲ್ಲಿ ಚುರುಕುತನ ಮೂಡಿಸಿ ಅಲ್ಲಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನ ಒದಗಿಸಿದ್ದಲ್ಲದೇ ಕ್ರೀಡಾ ತರಬೇತಿಗೆ ಪ್ರೋತ್ಸಾಹ ನೀಡಿ ಯುವ ಕ್ರೀಡಾ ಉತ್ಸಾಹಿಗಳು ತಮ್ಮ ಆಯ್ಕೆಮಾಡಿದ ವಿಭಾಗಗಳಲ್ಲಿ ಉತ್ತಮ ಸಾಧನೆ ಮಾಡಲು ಅಗತ್ಯವಾದ ಸಂಪನ್ಮೂಲಗಳನ್ನು ಒದಗಿಸಿಕೊಟ್ಟ ಕೀರ್ತಿ ಪ್ರಮೋದ್ ಮಧ್ವರಾಜರಿಗೆ ಸಲ್ಲಬೇಕಿದೆ. ಅವರ ನಾಯಕತ್ವದಲ್ಲಿ ರಾಜ್ಯದಲ್ಲಿ ಮೊತ್ತಮೊದಲ ಸಲ ರಾಜ್ಯಕ್ರೀಡಾ ನೀತಿಯನ್ನು ಜಾರಿಗೆ ತರಲಾಯಿತು. ಬ್ಯಾಡ್ಮಿಂಟನ್ ಕೋರ್ಟ್, ಟೆನ್ನಿಸ್ ಕೋರ್ಟ್, ಈಜುಕೊಳ ಮತ್ತು ಜಿಮ್ ಅನ್ನು ಒಳಗೊಂಡಿರುವ ಅತ್ಯಾಧುನಿಕ ಒಳಾಂಗಣ ಕ್ರೀಡೆಗಳು ಮತ್ತು ಆಟಗಳ ಅಖಾಡವನ್ನು ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ನಿರ್ಮಿಸಿದರು. ಉಡುಪಿಯ ಅಜ್ಜರಕಾಡು ಆಟದ ಮೈದಾನಕ್ಕೆ ನೂತನ ಸ್ವರೂಪವನ್ನು ನೀಡಿ ಆ ಕ್ರೀಡಾಂಗಣವನ್ನು ಆಧುನೀಕರಿಸಿ ಹಲವಾರು ಉನ್ನತ ಸೌಲಭ್ಯಗಳನ್ನು ಒದಗಿಸಿಕೊಟ್ಟರು.





ಭಾರತೀಯ ಜನತಾ ಪಕ್ಷ

# ಆರೋಗ್ಯ ಇಲಾಖೆಗೆ ಹೊಸ ಕಾಯಕಲ್ಪ

ಅವರ ಅಧಿಕಾರಾವಧಿಯಲ್ಲಿ ಉಡುಪಿ ಜಿಲ್ಲೆಯಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಇಲಾಖಾವಾರು ಕಾರ್ಯಚಟುವಟಿಕೆಗಳು ಚುರುಕುಗೊಂಡು ಸರ್ಕಾರಿ ಸೌಲಭ್ಯಗಳು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಅತ್ಯಂತ ಸುಲಭವಾಗಿ ತೆರೆದುಕೊಳ್ಳುವಂತೆ ಕ್ರಮ ಕೈಗೊಳ್ಳಲಾಯಿತು. ಸರ್ಕಾರಿ ಆಸ್ಪತ್ರೆಗಳಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಒದಗಿಸಿರುವುದು, ಆಸ್ಪತ್ರೆಗಳ ಮೇಲ್ದರ್ಜೆಗೆ ಕೊಂಡೊಯ್ದಿರುವುದು, ಗಮನಾರ್ಹವಾದ ಬದಲಾವಣೆಗಳಿಗೆ ಕಾರಣವಾಯಿತು. ಪ್ರಮೋದ್ ಮಧ್ವರಾಜ್ ಅವಧಿಯಲ್ಲಿ ಉಡುಪಿ ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದಲ್ಲಿ ಸರ್ಕಾರಿ ಹೆರಿಗೆ ಆಸ್ಪತ್ರೆಯ ಸ್ಥಾಪನೆ ಒಂದು ಮಹತ್ತರವಾದ ಕೊಡುಗೆ ಎಂದೇ ಬಣ್ಣಿಸಬಹುದು. ಈ ಸಂಸ್ಥೆಯನ್ನು ಖಾಸಗಿ ಸಹಭಾಗಿತ್ವದಲ್ಲಿ ಪ್ರಾರಂಭ ಮಾಡಲಾಗಿತ್ತು. ಪ್ರಮೋದ್ ಮಧ್ವರಾಜರ ಭವಿಷ್ಯದ ಕಲ್ಪನೆಗೆ, ಕನಸುಗಳಿಗೆ ಇದೆಲ್ಲ ಉದಾಹರಣೆಗಳು. ಫೈವ್ ಸ್ಟಾರ್ ಗುಣಮಟ್ಟದಲ್ಲಿ ಸರ್ಕಾರಿ ಆಸ್ಪತ್ರೆಯೊಂದು ಉಡುಪಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ಪ್ರಮೋದ್ ಮಧ್ವರಾಜ್ ಹೆಗ್ಗಳಿಕೆ. ಅದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ ಉಡುಪಿ ಜಿಲ್ಲೆಗೆ ಮೀಸಲಾದ ಹೊಸ ಆಯುಷ್ ಆಸ್ಪತ್ರೆಯ ನಿರ್ಮಾಣವೂ ಪ್ರಮೋದ್ ಮಧ್ವರಾಜ್ ಅಧಿಕಾರಾವಧಿಯಲ್ಲಿ ಆರಂಭಗೊಂಡಿತು.





# ಸಾರಿಗೆ ಸೌಕರ್ಯಕ್ಕೆ ಹೊಸ ಸ್ವರೂಪ

ಪ್ರಮೋದ್ ಅವಧಿಯಲ್ಲಿ ಸಾರಿಗೆ ಸಂಪರ್ಕ ವ್ಯವಸ್ಥೆ ಅಭೂತಪೂರ್ವ ಬದಲಾವಣೆಗೆ ತೆರೆದುಕೊಂಡಿತು. ಉಡುಪಿ ನಗರ ಮತ್ತು ಪ್ರಾದೇಶಿಕ ಬಸ್ ಸಂಪರ್ಕ ವ್ಯವಸ್ಥೆಗಳ ಸಂಪೂರ್ಣ ಬದಲಾವಣೆಗೆ ಮುನ್ನುಡಿ ಬರೆದದ್ದು ಪ್ರಮೋದ್. ಒಟ್ಟು ನಲವತ್ತನಾಲ್ಕು ಹೊಸ ಸರ್ಕಾರಿ ಬಸ್ಸುಗಳನ್ನು ನರ್ಮ್ ಯೋಜನೆಯ ಅಡಿಯಲ್ಲಿ ವಿಶೇಷವಾಗಿ ಹೊರವಲಯಗಳ ಪ್ರಯಾಣಿಕರಿಗಾಗಿ ತಂದದ್ದು, ಸಿಟಿ ಮತ್ತು ಇಂಟರ್ ಸಿಟಿಗಳಿಗೆ ಪ್ರತ್ಯೇಕ ಬಸ್ ನಿಲ್ದಾಣದ ವ್ಯವಸ್ಥೆಯನ್ನು ಏರ್ಪಾಡು ಮಾಡಿರುವುದು, ಬಹುಕೋಟಿ ವೆಚ್ಚದಲ್ಲಿ ಸಂಪರ್ಕ ಸೇತುವೆಗಳ ನಿರ್ಮಾಣ, ರಸ್ತೆಗಳ ನಿರ್ಮಾಣ, ರಸ್ತೆಯ ಅಗಲೀಕರಣ, ಬಸ್ ತಂಗುದಾಣಗಳ ನಿರ್ಮಾಣ ಈ ಎಲ್ಲಾ ಕಾರಣದಿಂದಾಗಿ ಉಡುಪಿ ವಿಧಾನಸಭಾ ಕ್ಷೇತ್ರದಾದ್ಯಂತ ಸಾರಿಗೆ ವ್ಯವಸ್ಥೆ ಹೊಸ ಬದಲಾವಣೆಗೆ ತೆರೆದುಕೊಂಡಿತು.





# ನಾಯಕತ್ವ ಮತ್ತು ದೂರದೃಷ್ಟಿ

ನಾಯಕರಾಗಿ ಪ್ರಮೋದ್ ಮಧ್ವರಾಜ್ ಅವರ ಯಶಸ್ಸಿಗೆ ಅವರ ಆದರ್ಶ ನಾಯಕತ್ವದ ಗುಣಗಳೇ ಕಾರಣ ಎನ್ನಬಹುದು. ಅವರದು ಅತ್ಯಂತ ವರ್ಚಸ್ವಿ ವ್ಯಕ್ತಿತ್ವ, ಅವರೊಬ್ಬ ಉತ್ತಮವಾದ ವಾಗ್ಮಿ, ಪ್ರತೀ ಕಾರ್ಯಕ್ರಮದ ಬಗ್ಗೆ, ಪ್ರತೀ ಕಾರ್ಯದ ಬಗ್ಗೆ ಮುಂಚಿತವಾಗಿಯೇ ಸಿದ್ಧಗೊಳ್ಳುವುದು, ಆಯಾ ವಿಭಾಗದ ಮಾಹಿತಿಗಳನ್ನು ಸಂಗ್ರಹಿಸಿ ಅಧ್ಯಯನ ನಡೆಸುವುದು, ಪ್ರತಿಯೊಬ್ಬರ ಜೊತೆಗೂ ಸರಳವಾಗಿ ಬೆರೆಯುವುದು, ಎಲ್ಲರನ್ನೂ ಸಮಾನ ದೃಷ್ಟಿಕೋನದಲ್ಲಿ ಗುರುತಿಸುವುದು, ತನಗಿರುವ ಗುಣಮಟ್ಟದ ಸಂವಹನ ಕಲೆಯ ಕಾರಣ ಹೀಗೆ ನಾನಾ ಕಾರಣಕ್ಕೆ ಪ್ರಮೋದ್ ಸರ್ವರಿಗೂ ಪ್ರೀತಿಪಾತ್ರ ನಾಯಕರಾಗಿ ಕಾಣಿಸಿಕೊಂಡರು. ಪ್ರಮೋದ್ ರ ಬಹುಮುಖ್ಯವಾದ ಅರ್ಹತೆ ಎಂದರೆ ಯಾವುದೇ ವಿಷಯದ ಬಗ್ಗೆಯೂ ನಿರರ್ಗಳವಾಗಿ ಮಾತಾಡಬಲ್ಲರು, ಯಾವುದೇ ಭಾಷಾ ಸಮಸ್ಯೆಯೂ ಅವರಲ್ಲಿಲ್ಲ, ರಾಷ್ಟ್ರಮಟ್ಟದ ರಾಜಕಾರಣಿಗೆ ಇರಬೇಕಾದ ಗ್ಲಾಮರ್, ವಾಕ್ಚಾತುರ್ಯ, ಅರಿವು ಅವರ ನಾಯಕತ್ವಕ್ಕೆ ಪುಷ್ಟಿ ನೀಡುತ್ತದೆ. ಮುಖ್ಯವಾಗಿ ಪ್ರಮೋದ್ ಮಧ್ವರಾಜ್ ಒಳಗೊಬ್ಬ ಕನಸುಗಾರನಿದ್ದಾನೆ, ಸಮಾಜದ ಕುರಿತಾಗಿಯೇ ಧ್ಯಾನಿಸುವ ಚಿಂತನಶೀಲನಿದ್ದಾನೆ, ಇದರಿಂದಾಗಿಯೇ ಪ್ರಮೋದ್ ಇತರ ನಾಯಕರಿಗಿಂತ ವಿಭಿನ್ನವಾಗಿ ಕಾಣಿಸಿಕೊಳ್ಳುತ್ತಾರೆ.

# ರಾಜಕಾರಣದ ಮಹತ್ತರವಾದ ಹೆಜ್ಜೆ

ರಾಜ್ಯಮಟ್ಟದಲ್ಲಿ ದೊಡ್ಡ ಪ್ರಸಿದ್ಧಿ ಹೊಂದಿದ್ದ ಭವಿಷ್ಯದಲ್ಲಿ ಕಾಂಗ್ರೇಸ್ ಪಕ್ಷದಲ್ಲಿ ಇನ್ನಷ್ಟು ಉನ್ನತ ಸ್ಥಾನ ಮಾನಗಳು ಸಿಗಬಹುದಾಗಿದ್ದ ನಾಯಕನಾಗಿ ಗುರುತಿಸಿಕೊಂಡಿದ್ದ ಪ್ರಮೋದ್ ಮಧ್ವರಾಜ್ ಆ ಪಕ್ಷಕ್ಕೆ ರಾಜಿನಾಮೆಯನ್ನು ನೀಡಿ ನರೇಂದ್ರ ಮೋದಿಯವರ ನಾಯಕತ್ವದಿಂದ ಪ್ರೇರಣೆಗೊಂಡು ಬಿಜೆಪಿಯನ್ನು ಸೇರುವ ಮೂಲಕ ರಾಜ್ಯದ ಪ್ರಭಾವಿ ಮೀನುಗಾರಿಕಾ ಸಮುದಾಯದ ಮುಖಂಡನೊಬ್ಬ ಬಿಜೆಪಿ ಪಕ್ಷಕ್ಕೆ ದೊಡ್ಡ ಬಲವನ್ನು ಒದಗಿಸಿಕೊಟ್ಟಂತಾಗಿತ್ತು. ಪ್ರಮೋದ್ ಮಧ್ವರಾಜ್ ಆಗಲೇ ಪ್ರಭಾವಶಾಲಿ ನಾಯಕರಾಗಿ ಬೆಳೆದಿದ್ದರು. ಬಿಜೆಪಿ ಪಕ್ಷಕ್ಕೆ ಸೇರ್ಪಡೆಗೊಂಡು ಯಾವುದೇ ಹುದ್ದೆಯನ್ನಾಗಲಿ, ಸ್ಥಾನಮಾನವನ್ನಾಗಲಿ ಅಪೇಕ್ಷೆಪಡದೆ ರಾಜ್ಯದಾದ್ಯಂತ ಪ್ರವಾಸ ಮಾಡಿ ಹಿಂದಿನ ಸಾಲಿನ ವಿಧಾನಸಭಾ ಕ್ಷೇತ್ರದ ಚುನಾವಣೆಯ ಸಂದರ್ಭ ಪಕ್ಷದ ಬಲವರ್ಧನೆಗೆ ನಿರಂತರವಾಗಿ ಶ್ರಮಿಸಿ ಹಿರಿಯ ನಾಯಕರ ಶ್ಲಾಘನೆಗೆ ಒಳಪಟ್ಟರು. ಉಡುಪಿ ಜಿಲ್ಲೆಯ ಐದಕ್ಕೆ ಐದೂ ಕ್ಷೇತ್ರದಲ್ಲಿ ಪ್ರಮೋದ್ ಮಧ್ವರಾಜ್ ಸಕ್ರೀಯವಾಗಿ ತೊಡಗಿಸಿಕೊಂಡು ಐದೂ ಕ್ಷೇತ್ರಗಳಲ್ಲಿ ಗೆಲುವು ದಾಖಲಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.

# “ಪ್ರಮೋದ್” ಎನ್ನುವ ಪ್ರೇರಣೆ

ಪ್ರಮೋದ್ ಮಧ್ವರಾಜ್ ಕೇವಲ ಓರ್ವ ರಾಜಕಾರಣಿಯಲ್ಲ ಆತ ವಾತ್ಸಲ್ಯಪೂರ್ಣ ಮಾನವತಾವಾದಿ, ಅವರು ನೀಡಿದ ಕೋಟ್ಯಾಂತರ ರೂಪಾಯಿಗಳ ನೆರವು ಸಾವಿರಾರು ಕುಟುಂಬದ ಬೆಳಕಾಗಿದೆ, ನೂರಾರು ಜನರಿಗೆ ಪ್ರೇರಣೆಯಾಗಿದೆ, ಸಾವಿರಾರು ಜನರ ಬದುಕನ್ನು ರೂಪಿಸಲು ಸಹಕಾರಿಯಾಗಿದೆ. ರಾಜ್ಯ ರಾಜಕಾರಣದ ಕ್ಷೇತ್ರದಲ್ಲಿ ತನ್ನದೇ ಆದ ವೈಷಿಷ್ಟ್ಯಪೂರ್ಣ ನಡಾವಳಿಯ ಕಾರಣಕ್ಕೆ ಗಮನ ಸೆಳೆದ ಪ್ರಮೋದ್ ಮಧ್ವರಾಜ್ ರಾಜ್ಯದ ಪ್ರಮುಖ ವರ್ಗವಾದ ಮೀನುಗಾರಿಕಾ ಸಮುದಾಯದ ನಾಯಕನಾಗಿ ಮಾತ್ರವಲ್ಲದೆ ಎಲ್ಲಾ ವರ್ಗ, ಸಮುದಾಯವೂ ಒಪ್ಪಿ ಗೌರವಿಸುವ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಅವರ ಶ್ರೀಮಂತಿಕೆ ಇರುವುದು ಅವರ ಅಧಿಕಾರದಲ್ಲಾಗಲಿ, ಆರ್ಥಿಕ ಶಕ್ತಿಯಲ್ಲಾಗಲಿ ಅಲ್ಲ, ಪ್ರಮೋದ್ ಮಧ್ವರಾಜ್ ನೈಜ ಶ್ರೀಮಂತಿಕೆ ಅವರ ಮಾನವೀಯ ಹೃದಯವಂತಿಕೆಯಲ್ಲಿರುವುದು. ಅದನ್ನು ಜನತೆ ಗುರುತಿಸಿದ್ದಾರೆ, ಇಂತಹ ಸಮರ್ಥ, ಸಾಮರ್ಥ್ಯವಂತ, ಸುಗುಣಶೀಲ ನಾಯಕನಿಗೆ ರಾಜ್ಯವಷ್ಟೇ ಅಲ್ಲ ರಾಷ್ಟ್ರಮಟ್ಟದಲ್ಲಿಯೂ ಸೇವೆ ಸಲ್ಲಿಸುವ ಅವಕಾಶ ಸಿಕ್ಕರೆ ಅದಕ್ಕೆ ಪ್ರಮೋದ್ ಮಧ್ವರಾಜ್ ನ್ಯಾಯ ಒದಗಿಸಬಲ್ಲರು ಎನ್ನುವ ವಿಶ್ವಾಸ ಜನಮಾನಸದಲ್ಲಿದೆ.

# ಹಸುವಿನೊಂದಿಗೆ ಹಸುಗೂಸು!

ಪ್ರಮೋದ್ ಮಧ್ವರಾಜ್ ತನ್ನ ಮನೆಯ ಮಗ್ಗುಲಿನಲ್ಲೇ ತನ್ನದೇ ಆದ ಗೋಶಾಲೆಯೊಂದನ್ನು ನಿರ್ಮಿಸಿಕೊಂಡಿದ್ದಾರೆ. ಅದು ರಾಜಕಾರಣಕ್ಕೆ ಬಂದ ಮೇಲಲ್ಲ, ಅಥವಾ ಬಿಜೆಪಿ ಪಕ್ಷಕ್ಕೆ ಸೇರ್ಪಡೆಗೊಂಡ ಮೇಲಿನ ಗೋ ಪ್ರೇಮವಲ್ಲ. ಬಾಲ್ಯದಿಂದಲೂ ಪ್ರಮೋದ್ ಮಧ್ವರಾಜರಿಗೆ ಜಾನುವಾರುಗಳ ಮೇಲೆ ಅಪಾರವಾದ ಪ್ರೇಮ. ಪ್ರತೀ ದಿವಸ ಮನೆಯಿಂದ ಹೊರ ಹೊರಡುವ ಮೊದಲು ತನ್ನ ಗೋಶಾಲೆಯಲ್ಲಿನ ಹಸುಗಳಿಗೆ ತಾವೇ ತಿನಿಸು ನೀಡಿ ಒಂದಷ್ಟು ಹೊತ್ತು ಅವುಗಳ ಯೋಗಕ್ಷೇಮ ವಿಚಾರಿಸುತ್ತಾ ಮಗುವಿನಂತೆ ತನ್ಮಯರಾಗಿ ನಂತರವೇ ಮನೆಯಿಂದ ಹೊರಡುವುದು ಅವರ ದಿನಚರಿಗಳಲ್ಲೊಂದು.





ಭಾರತೀಯ ಜನತಾ ಪಕ್ಷ

# ಉಡುಪಿಯ No. 1 ತೆರಿಗೆ ಪಾವತಿದಾರ ಶ್ರೀ ಪ್ರಮೋದ್ ಮಧ್ವರಾಜ್

ಪ್ರಮೋದ್ ಮಧ್ವರಾಜ್ ತೆರಿಗೆ ಇಲಾಖೆಯಿಂದ ನಂಬರ್ ಒನ್ ತೆರಿಗೆ ಪಾವತಿದಾರ ಎಂಬ ಹಿರಿಮೆಗೆ ಪಾತ್ರರಾದವರು. ಎಲ್ಲಾ ರಾಜಕಾರಣಿಗಳು ಹಣವನ್ನು ಸಂಗ್ರಹಿಸುವಾಗ ಮತ್ತು ತೆರಿಗೆ ಪಾವತಿಸುವುದನ್ನು ತಪ್ಪಿಸಲು ಅನೇಕ ವಿಧಾನಗಳು ಮತ್ತು ಮಾರ್ಗಗಳನ್ನು ಹುಡುಕುತ್ತಿರುವಾಗ, ಈ ಗೌರವವು ಪ್ರಮೋದ್ ಮಧ್ವರಾಜ್ ರವರಿಗೆ ನಿಜವಾಗಿಯೂ ಪ್ರತಿಷ್ಠಿತ ರಾಜಕೀಯ ನಾಯಕ ಎಂಬುದನ್ನು ಸಾಬೀತುಪಡಿಸುತ್ತದೆ

## ಪ್ರಾಮಾಣಿಕತೆಯೇ ಪರಮಾತ್ಮ

ಸದಾ ಜನರ ಜೊತೆಗೆ ಬೆರೆಯುವಲ್ಲಿ ಉತ್ಸುಕರಾಗಿರುವ ಪ್ರಮೋದ್ ಬರುತ್ತೇನೆ ಎಂದು ಬಾರದೆ ಇರುವುದು, ಸುಳ್ಳು ನೆಪ ಹೇಳಿ ತಪ್ಪಿಸಿಕೊಳ್ಳುವುದು, ಸಾಮಾನ್ಯ ರಾಜಕಾರಣಿಯಂತೆ ಸ್ಪಂದನೆಗೆ ಸಿಗದೇ ಇರುವಂತಹ ಅಪರಾಧಗಳನ್ನ ಮಾಡುವವರಲ್ಲ. ಪ್ರಾಮಾಣಿಕತೆಗೆ ಪ್ರಮೋದ್ ಎಷ್ಟು ಒತ್ತು ನೀಡುತ್ತಿದ್ದರೆಂದರೆ ತನ್ನ ಕ್ಷೇತ್ರದ ಯಾವುದೇ ಅಧಿಕಾರಿಯ ವಿರುದ್ಧ ಭ್ರಷ್ಟಾಚಾರದ ಆರೋಪ ಬಂದಾಗ, ಆತ ಜನಪೀಡಕ ಎನ್ನುವ ಮಾಹಿತಿ ಬಂದಾಗ ಪ್ರಮೋದ್ ಕೆಂಡಾಮಂಡಲವಾಗುತ್ತಿದ್ದರು ಮಾತ್ರವಲ್ಲ ಆ ಅಧಿಕಾರಿಯನ್ನು ತಕ್ಷಣವೇ ವರ್ಗಾವಣೆ ಮಾಡಿಸಿಯೇ ಬಿಡುತ್ತಿದ್ದರು. ಪ್ರಮೋದ್ ಮಧ್ವರಾಜ್ ಇದ್ದಲ್ಲಿ ಭ್ರಷ್ಟಾಚಾರಕ್ಕೆ ಜಾಗವಿಲ್ಲ ಎನ್ನುವ ಮಾತು ಜನಜನಿತ. ನರೇಂದ್ರ ಮೋದಿಯವರ 'ನಾ ಖಾವೂಂಗ ನಾ ಖಾನೆದೂಂಗ' ಎನ್ನುವ ಮಾತಿನ ಹಾಗೆ ಪ್ರಮೋದ್ ಕೂಡ ತನ್ನ ರಾಜಕಾರಣದ ಜೀವನದಲ್ಲಿ ಅದನ್ನ ಅಳವಡಿಸಿಕೊಂಡಿದ್ದರು





# ಭಾರತೀಯ ಜನತಾ ಪಕ್ಷ


















ಭಾರತೀಯ ಜನತಾ ಪಕ್ಷ














**Contact Details:**
Mob: +91 9845243833
Personal Email: pramodmadhwaraj88 @gmail.com
Official Email: pramodmadhwaraj.ammunjeoffice@gmail.com

**Postal Address:**
Near St. Antony's Church, Ammunje, Uppur Village,
Thenkabettu Post, Udupi - 576105, Karnataka